جمعية خدمة المحتوى
الإسلامي باللغات

# ಇಸ್ಲಾಂ - ಅಲ್ಲಾಹನ ಸಂದೇಶವಾಹಕರುಗಳ ಧರ್ಮ

ಕನ್ನಡ | كنادي | الإِسْلَامُ دِينُ رُسُلِ اللَّهِ

ವಿಭಿನ್ನ ಭಾಷೆಗಳಲ್ಲಿ ಇಸ್ಲಾಮೀ ವಿಷಯಗಳ ಸೇವಾ ಸಂಘದ
ವೈಜ್ಞಾನಿಕ ಸಮಿತಿ

الإِسْلَامُ دِينُ رُسُلِ اللهِ

# ಇಸ್ಲಾಂ - ಅಲ್ಲಾಹನ ಸಂದೇಶವಾಹಕರುಗಳ ಧರ್ಮ


اللَّجْنَةُ العِلْمِيَّةُ

بِجَمْعِيَّةِ خِدْمَةِ المُحْتَوَى الإِسْلَامِيِّ بِاللُّغَاتِ

ವಿಭಿನ್ನ ಭಾಷೆಗಳಲ್ಲಿ ಇಸ್ಲಾಮೀ ವಿಷಯಗಳ ಸೇವಾ ಸಂಘದ

ವೈಜ್ಞಾನಿಕ ಸಮಿತಿ

بِسْمِ اللهِ الرَّحمَنِ الرَّحِيمِ

# ಇಸ್ಲಾಂ - ಅಲ್ಲಾಹನ ಸಂದೇಶವಾಹಕರುಗಳ ಧರ್ಮ

ಇಸ್ಲಾಂ ಎಂದರೆ ವಿಶ್ವವನ್ನು ಸೃಷ್ಟಿಸಿ, ನಿಯಂತ್ರಿಸುತ್ತಿರುವ ಅಲ್ಲಾಹನಿಗೆ ಸಂಪೂರ್ಣವಾಗಿ ಶರಣಾಗುವುದು ಮತ್ತು ಪ್ರೀತಿ ಹಾಗೂ ಗೌರವದಿಂದ ಅವನಿಗೆ ತಲೆಬಾಗುವುದು. ಅಲ್ಲಾಹನಲ್ಲಿರುವ ನಂಬಿಕೆಯೇ ಇಸ್ಲಾಂನ ಮೂಲ ಅಡಿಪಾಯವಾಗಿದೆ. ಅವನೇ ಸೃಷ್ಟಿಕರ್ತನು ಮತ್ತು ಅವನ ಹೊರತಾದುದೆಲ್ಲವೂ ಅವನ ಸೃಷ್ಟಿಗಳಾಗಿದ್ದಾರೆ. ಏಕೈಕನು ಮತ್ತು ಯಾವುದೇ ಸಹಭಾಗಿಗಳಿಲ್ಲದ ಅವನು ಮಾತ್ರ ಆರಾಧನೆಗೆ ಅರ್ಹನು. ಅವನ ಹೊರತು ಆರಾಧನೆಗೆ ಅರ್ಹರಾದವರು ಯಾರೂ ಇಲ್ಲ. ಅವನಿಗೆ ಅತಿಸುಂದರವಾದ ಹೆಸರುಗಳು ಮತ್ತು ಉನ್ನತ ಗುಣಲಕ್ಷಣಗಳಿವೆ. ಅವನು ಸರ್ವಸಂಪೂರ್ಣನು. ಅವನಲ್ಲಿ ಯಾವುದೇ ಅಪೂರ್ಣತೆಗಳಿಲ್ಲ. ಅವನು ಯಾರಿಗೂ ಜನ್ಮ ನೀಡಿಲ್ಲ ಮತ್ತು ಅವನು ಯಾರಿಂದಲೂ ಜನ್ಮವನ್ನು ಪಡೆದಿಲ್ಲ. ಅವನಿಗೆ ಸರಿಸಾಟಿಯಾಗಿ, ಹೋಲಿಕೆಯಾಗಿ ಯಾರೂ ಇಲ್ಲ. ಅವನು ಅವತಾರ ಹೊಂದುವುದಿಲ್ಲ ಮತ್ತು ಅವನು ತನ್ನ ಸೃಷ್ಟಿಗಳಲ್ಲಿ ಯಾರ ದೇಹದಲ್ಲೂ ಇಳಿಯುವುದಿಲ್ಲ.

ಇಸ್ಲಾಂ ಅಲ್ಲಾಹನ ಧರ್ಮ. ಅವನು ಬೇರೆ

ಯಾವುದೇ ಧರ್ಮವನ್ನು ಯಾರಿಂದಲೂ ಸ್ವೀಕರಿಸುವುದಿಲ್ಲ. ಅದು ಎಲ್ಲಾ ಪ್ರವಾದಿಗಳು ತಂದ ಅದೇ ಧರ್ಮ.

ಎಲ್ಲಾ ಪ್ರವಾದಿಗಳಲ್ಲೂ ವಿಶ್ವಾಸವಿರಿಸುವುದು ಇಸ್ಲಾಂ ಧರ್ಮದ ಮೂಲ ತತ್ವಗಳಲ್ಲಿ ಒಂದಾಗಿದೆ. ಅಲ್ಲಾಹು ತನ್ನ ಆಜ್ಞೆಗಳನ್ನು ತನ್ನ ದಾಸರಿಗೆ ತಲುಪಿಸುವುದಕ್ಕಾಗಿ ಪ್ರವಾದಿಗಳನ್ನು ಕಳುಹಿಸಿದನು ಮತ್ತು ಅವರಿಗೆ ಗ್ರಂಥಗಳನ್ನು ಅವತೀರ್ಣಗೊಳಿಸಿದನು. ಅವರಲ್ಲಿ ಕೊನೆಯವರು ಪ್ರವಾದಿ ಮುಹಮ್ಮದ್ (ಸ). ಅಲ್ಲಾಹು ಅವರನ್ನು ಅಂತಿಮ ದೈವಿಕ ಶರೀಅತ್‌ನೊಂದಿಗೆ ಕಳುಹಿಸಿದನು. ಅದು ಮುಂಚಿನ ಪ್ರವಾದಿಗಳ ಶರೀಅತ್‌ಗಳನ್ನು ರದ್ದುಗೊಳಿಸುತ್ತದೆ. ಅಲ್ಲಾಹು ಅವರನ್ನು ಮಹಾ ದೃಷ್ಟಾಂತಗಳ ಮೂಲಕ ಬಲಪಡಿಸಿದನು. ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಪವಿತ್ರ ಕುರ್‌ಆನ್. ಅದು ಸರ್ವಲೋಕಗಳ ಪರಿಪಾಲಕನ ವಾಣಿ ಮತ್ತು ಮನುಕುಲವು ಕಂಡ ಅತಿಶ್ರೇಷ್ಠ ಗ್ರಂಥವಾಗಿದೆ. ಅದರ ವಿಷಯವಸ್ತು, ಪದಗಳು ಮತ್ತು ರಚನೆಯಲ್ಲಿ ಅದು ಅಮಾನುಷಿಕವಾಗಿದೆ. ಅದರಲ್ಲಿ ಇಹಲೋಕ ಮತ್ತು ಪರಲೋಕದ ಸಂತೋಷಕ್ಕೆ ಕಾರಣವಾಗುವ ಸತ್ಯದ ಕಡೆಗೆ ಮಾರ್ಗದರ್ಶನವಿದೆ. ಇಂದಿನವರೆಗೂ ಅದು ಅವತೀರ್ಣಗೊಂಡ ಮೂಲ ಅರಬೀ ಭಾಷೆಯಲ್ಲಿಯೇ ಅದನ್ನು ಸಂರಕ್ಷಿಸಲಾಗಿದೆ. ಅದರ ಒಂದು ಅಕ್ಷರವೂ ಬದಲಾಗಿಲ್ಲ ಅಥವಾ

ವಿರೂಪಗೊಂಡಿಲ್ಲ.

ಮಲಕ್‌ಗಳಲ್ಲಿ (ದೇವದೂತರುಗಳಲ್ಲಿ) ವಿಶ್ವಾಸವಿರಿಸುವುದು ಇಸ್ಲಾಂನ ಮೂಲ ತತ್ವಗಳಲ್ಲಿ ಒಂದಾಗಿದೆ. ಹಾಗೆಯೇ, ಅಂತಿಮ ದಿನದಲ್ಲಿ ವಿಶ್ವಾಸವಿರಿಸುವುದು ಕೂಡ. ಆ ದಿನ, ಅಂದರೆ ಪುನರುತ್ಥಾನದ ದಿನ, ಜನರು ಮಾಡಿದ ಕರ್ಮಗಳ ವಿಚಾರಣೆಗಾಗಿ ಅಲ್ಲಾಹು ಅವರನ್ನು ಅವರ ಸಮಾಧಿಗಳಿಂದ ಎಬ್ಬಿಸುವನು. ಯಾರು ವಿಶ್ವಾಸಿಯಾಗಿದ್ದು ಸತ್ಕರ್ಮಗಳನ್ನು ಮಾಡಿದ್ದಾರೋ ಅವರಿಗೆ ಸ್ವರ್ಗದಲ್ಲಿ ಶಾಶ್ವತ ಸುಖವಿದೆ. ಯಾರು ಸತ್ಯನಿಷೇಧಿಯಾಗಿ, ದುಷ್ಕರ್ಮಗಳನ್ನು ಮಾಡಿದ್ದಾರೋ ಅವರು ನರಕದಲ್ಲಿ ಭಯಾನಕ ಶಿಕ್ಷೆಯನ್ನು ಅನುಭವಿಸುವರು. ಅಲ್ಲಾಹು ವಿಧಿಸಿದ ಒಳಿತು ಮತ್ತು ಕೆಡುಕುಗಳಲ್ಲಿ ವಿಶ್ವಾಸವಿರಿಸುವುದು ಕೂಡ ಇಸ್ಲಾಂನ ತತ್ವಗಳಲ್ಲಿ ಒಳಪಡುತ್ತದೆ.

ಪ್ರವಾದಿ ಈಸಾ(ಅ) (ಯೇಸು) ರವರು ಅಲ್ಲಾಹನ ದಾಸರು ಮತ್ತು ಸಂದೇಶವಾಹಕರು ಆಗಿದ್ದಾರೆಯೇ ಹೊರತು ಅವರು ಅಲ್ಲಾಹನ ಪುತ್ರರಲ್ಲ ಎಂದು ಮುಸ್ಲಿಮರು ನಂಬುತ್ತಾರೆ. ಏಕೆಂದರೆ ಅಲ್ಲಾಹು ಅತ್ಯಂತ ಮಹಾನನಾಗಿದ್ದು ಅವನಿಗೆ ಮಡದಿ ಅಥವಾ ಮಕ್ಕಳು ಇರಲು ಸಾಧ್ಯವೇ ಇಲ್ಲ. ಆದರೆ ಅಲ್ಲಾಹು ಪವಿತ್ರ ಕುರ್‌ಆನ್‌ನಲ್ಲಿ ನಮಗೆ ತಿಳಿಸಿದ್ದೇನೆಂದರೆ, ಈಸಾ (ಅ) ರವರು ಒಬ್ಬ ಪ್ರವಾದಿಯಾಗಿದ್ದಾರೆ ಮತ್ತು

ಅಲ್ಲಾಹು ಅವರಿಗೆ ಅನೇಕ ಪವಾಡಗಳನ್ನು ನೀಡಿದ್ದಾನೆ. ಹಾಗೆಯೇ, ಅವರು ತಮ್ಮ ಜನಾಂಗವನ್ನು ಅಲ್ಲಾಹನನ್ನು ಮಾತ್ರ ಆರಾಧಿಸುವುದರ ಕಡೆಗೆ ಕರೆಯಲು ಅಲ್ಲಾಹು ಅವರನ್ನು ಕಳುಹಿಸಿದ್ದಾನೆ. ಅದೇ ರೀತಿ, ಈಸಾ (ಅ) ರವರು ತನ್ನನ್ನು ಆರಾಧಿಸುವಂತೆ ಜನರಿಗೆ ಹೇಳಲಿಲ್ಲ, ಬದಲಾಗಿ ಅವರು ಸ್ವತಃ ಅವರ ಸೃಷ್ಟಿಕರ್ತನನ್ನು (ಅಲ್ಲಾಹನನ್ನು) ಆರಾಧಿಸುತ್ತಿದ್ದರು ಎಂದು ತಿಳಿಸಿದ್ದಾನೆ.

ಇಸ್ಲಾಂ ಪ್ರಕೃತಿಯೊಂದಿಗೆ ಮತ್ತು ಸ್ವಸ್ಥ ಬುದ್ಧಿಯೊಂದಿಗೆ ಹೊಂದಿಕೊಳ್ಳುವ ಧರ್ಮವಾಗಿದೆ. ಆರೋಗ್ಯಪೂರ್ಣ ಮನಸ್ಸುಗಳು ಅದನ್ನು ಸ್ವೀಕರಿಸುತ್ತವೆ. ಇದು ಮಹಾನ್ ಸೃಷ್ಟಿಕರ್ತನು (ಅಲ್ಲಾಹು) ತನ್ನ ಸೃಷ್ಟಿಗಳಿಗಾಗಿ ನಿಯಮಗೊಳಿಸಿದ ಧರ್ಮವಾಗಿದೆ. ಇದು ಸರ್ವ ಜನರಿಗೂ ಒಳಿತು ಮತ್ತು ಸಂತೋಷವನ್ನು ನೀಡುವ ಧರ್ಮವಾಗಿದೆ. ಈ ಧರ್ಮದಲ್ಲಿ ಜಾತಿ, ಮತ ಅಥವಾ ವರ್ಣಭೇದವಿಲ್ಲ. ಇದರಲ್ಲಿ ಮನುಷ್ಯರೆಲ್ಲರೂ ಸಮಾನರು. ಸತ್ಕರ್ಮದಿಂದಲ್ಲದೆ ಇಸ್ಲಾಂನಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗಿಂತ ಶ್ರೇಷ್ಠನಾಗುವುದಿಲ್ಲ.

ಪ್ರತಿಯೊಬ್ಬ ಪ್ರಬುದ್ಧ ಮನುಷ್ಯನು ಅಲ್ಲಾಹನನ್ನು ರಬ್ ಎಂದು (ದೇವರೆಂದು), ಇಸ್ಲಾಂ ಅನ್ನು ಧರ್ಮವೆಂದು ಮತ್ತು ಮುಹಮ್ಮದ್ (ಸ) ರನ್ನು ಪ್ರವಾದಿಯೆಂದು ನಂಬುವುದು ಕಡ್ಡಾಯವಾಗಿದೆ. ಈ

ವಿಷಯದಲ್ಲಿ ಮನುಷ್ಯನಿಗೆ ಆಯ್ಕೆಯಿಲ್ಲ. ಏಕೆಂದರೆ, ಪ್ರವಾದಿಗಳಿಗೆ ಏನು ಉತ್ತರ ನೀಡಿದೆಯೆಂದು ಅಲ್ಲಾಹು ಪುನರುತ್ಥಾನ ದಿನದಂದು ಕೇಳುತ್ತಾನೆ. ಅವನು ಸತ್ಯವಿಶ್ವಾಸಿಯಾಗಿದ್ದರೆ ಅವನಿಗೆ ಮಹಾ ವಿಜಯ ಮತ್ತು ಯಶಸ್ಸು ಇದೆ. ಆದರೆ ಅವನು ಸತ್ಯನಿಷೇಧಿಯಾಗಿದ್ದರೆ ದೊಡ್ಡ ನಷ್ಟವನ್ನು ಅನುಭವಿಸುತ್ತಾನೆ.

ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಬಯಸುವ ವ್ಯಕ್ತಿ, "ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್" ಎಂದು ಅದರ ಅರ್ಥವನ್ನು ಅರಿತು ವಿಶ್ವಾಸವಿಟ್ಟು ಹೇಳಬೇಕು. ಇದರಿಂದ ಅವನು ಮುಸ್ಲಿಮನಾಗುತ್ತಾನೆ. ನಂತರ ಅಲ್ಲಾಹು ಆಜ್ಞಾಪಿಸಿದ ಕರ್ಮಗಳನ್ನು ನಿರ್ವಹಿಸುವುದಕ್ಕಾಗಿ ಇಸ್ಲಾಂ ಧರ್ಮದ ಇತರ ನಿಯಮಗಳನ್ನು ಸ್ವಲ್ಪ ಸ್ವಲ್ಪವಾಗಿ ಕಲಿಯಬೇಕು.

ಹೆಚ್ಚಿನ ಮಾಹಿತಿಗಾಗಿ: https://byenah.com/kn/discover-islam

***

kn364v2.0 - 18/02/2026

جمعية خدمة المحتوى
الإسلامي باللغات